ಹೋಗಲತ್ತಿದಳು. ಎದುರಿಗೆ ಸಿಕ್ಕವರು ದೊಡ್ಡಕ್ಕನನ್ನು ಕಂಡು, 'ಏನವಾ ಭಾಳ ದಿನಾತು' ಎಂದು ನಿಲ್ಲಿಸಿದರು. 'ನೀನ್ ಒಳಾಗೋಗು' ಎಂದು ದೊಡ್ಡಕ್ಕ ಒಳ ಹೋಗುತ್ತಿದ್ದಂತೆ ಸಲೀಮ ಬಂದು ರಾಧಾಳ ಜೊತೆಯಾದ.

ಇಬ್ಬರೂ ಮಾತಾಡದೇ ಮನೆ ಹೊಕ್ಕರು. ಈ ಕಾಲೋನಿಯ ಕಡೆಗೆ ಬಾಡಿಗೆಗೆ ಬಂದಾಗ ಬರೀ ಕಾಂಪೌಂಡುಗಳನ್ನೇ ನೋಡಿ 'ಯಾ ಅಲ್ಲಾ ಏನ್ ದೊಡ್ಡುದ್ದೈತೆ ನೋಡು!' ಎಂದು ಮುಂದೆ ಹೋಗುತ್ತಿದ್ದ ಸಲೀಮ ಈಗ ಅಂತಹ ಒಂದು ಮನೆಯ ಒಳಗೆ ಕಾಲಿಕ್ಕಿದ್ದ. ಮನೆ ತುಂಬಾ ಕಿಲಿ ಕಿಲಿ ಎನ್ನುವ ಮಕ್ಕಳೋ ಮಕ್ಕಳು. ಮನೆಯ ವಿಶಾಲವಾದ ಹಾಲ್‌ಗೆ ಬಂದ ರಾಧಾ ಐನೂರರ ವ್ಯಕ್ತಿಗೆ ಹುಡುಕಾಡಿದಳು. ಅಷ್ಟರಲ್ಲಿ ಹೆಂಗಸೊಬ್ಬಳು ಮುದ್ದಾಗಿ ಸಿಂಗಾರ ಮಾಡಿರುವ ಐದಾರು ತಿಂಗಳಿನ ಕೂಸೊಂದನ್ನು ಎತ್ತಿಕೊಂಡು ಬಂದಳು. ಕೆಲ ಹೆಂಗಸರು ಅವಳಿಗೆ ಜಾಗ ಮಾಡಿಕೊಟ್ಟಾಗ ರಾಧಾಳಿಗೆ ಭರ್ಜರಿಯಾಗಿ ಅಲಂಕಾರಗೊಂಡ ಸುಂದರ ತೊಟ್ಟಿಲೊಂದು ಕಂಡಿತು. ಹೆಂಗಸು ತೊಟ್ಟಿಲಲ್ಲಿ ಮಗುವನ್ನು ಮಲಗಿಸಿ ತೂಗಲತ್ತಿದಾಗ ಸುತ್ತಲಿನವರು ಜೋಲಾಲಿ ಹಾಡಲತ್ತಿದರು. ಫೋಟೋಗ್ರಾಫರ್ ತನ್ನ ಕ್ಯಾಮರಾಗೆ ಕೆಲಸ ಕೊಟ್ಟ ಮರುಕ್ಷಣ ರಾಜಕಾರಣಿಯ ಧಿರಿಸಿನಲ್ಲಿದ್ದ ಐನೂರರ ಆಸಾಮಿ ಅವಸರದಲ್ಲಿ ಬಂದು ಹೆಂಗಸಿನ ಪಕ್ಕ ನಿಂತ. ರಾಧಾಳ ಸುತ್ತಮುತ್ತ ನಿಂತವರಲ್ಲಿ ಒಬ್ಬ, 'ನಮ್ ಅಣ್ಣ ನೋಡು ಎಷ್ಟ್ ಜೋರೈದಾರ?' ಎಂದಾಗ ಅವನ ಪಕ್ಕದವ, 'ಗಂಡ್ ಹುಟ್ಟಿದ್ರೆ ನಾನೂ ಹಂಗೇ ಇರ್ತಿದ್ದೆ' ಎಂದು ಅಳು ಮುಖ ಮಾಡಿದ. ಅದಕ್ಕವನು 'ದನ ಕಾಯಾಕ ಹೋಗು ಗಂಡ್ ಹುಡ್ಗನ್ನ ಕರ್ಕಂಡು' ಎಂದು ಬೈದುಕೊಂಡ. ಕ್ಯಾಮರಾ ಪಟ ಪಟ ಫ್ಲ್ಯಾಶ್ ಆಯಿತು.

ಎರಡೆಜ್ಜೆ ಮುಂದೆ ಇಟ್ಟ ರಾಧಾಳನ್ನು ತಡೆದ ದೊಡ್ಡಕ್ಕ, 'ಅಪ್ಯಾಕ ಅರ್ಜೆಂಟ್ ಮಾಡ್ತೀ ತಡ್ಕ, ಹೆಸ್ರು ಇಟ್ಟ್ ಬುಡ್ಲಿ ಆಮೇಲೆ ಹೋಗಾನ' ಎಂದಳು. ಗಂಟಲಿಗೆ ಬಂದ ಐನೂರರ ಆಸಾಮಿಯ ವಿಷಯ ಅಲ್ಲೇ ನಿಂತಿತು. ಮುದುಕಿಯರೆಲ್ಲಾ ಒಂದುಗೂಡಿ, 'ಏನಪಾ ಹೆಸ್ರು?' ಎಂದಾಗ ಗಂಡ ಹೆಂಡತಿ, 'ಅಮಾ ಹೇಳಮಾ' ಎಂದು ಅಮ್ಮನ ಕಡೆಗೆ ತಿರುಗಿದರು. ಹಣೆ ಖಾಲಿಯಿದ್ದ ಹೆಂಗಸೊಬ್ಬಳು, 'ಮೋಹನ...' ಎಂದು ಎದುರಿನ ಗೋಡೆ ನೋಡಿ ತೊಟ್ಟಿಲ ಹತ್ತಿರಕ್ಕೆ ಬಂದಳು. ತಿರುಗಿದ ರಾಧಾಳ ದೃಷ್ಟಿ ಗೋಡೆಯ ಮೇಲೆ ದೊಡ್ಡದು ಮಾಡಿಸಿ ಫ್ರೇಂ ಹಾಕಿಸಿ ಗಂಧದ ಹಾರ ತೂಗು ಹಾಕಿ ಮೇಲೊಂದು ಝೀರೋ ಬಲ್ಬು ಉರಿಸಿದ್ದ ಫೋಟೊದೆಡೆಗೆ ನೆಟ್ಟಿತು. ಫೋಟೊದಲ್ಲಿ ಸೂಟು ಹಾಕಿಕೊಂಡಿದ್ದ ರಮೇಶ ಕಕ್ಕಪ್ಪನಿದ್ದ.

ರಾಧ ಮತ್ತೆ ಮೋಹನನಾದ, ಇಡೀ ಬಾಲ್ಯ ನೆನಪಾಯಿತು. ಕಕ್ಕಪ್ಪ ಮತ್ತು ಸಿನಿಮಾಗಳನ್ನು ತೋರಿಸಿದ್ದ ಅಜ್ಜಿಯೂರಿನ ಸಿದ್ದಲಿಂಗೇಶ್ವರ ಟಾಕೀಸು ಕಣ್ಣಮುಂದೆ ಬಂದು ಉಸಿರು ಮತ್ತೆ ಮತ್ತೆ ಹದ ತಪ್ಪಿತು. ಬಾ ಎನ್ನುವಂತೆ ಸನ್ನೆ ಮಾಡಿದ ದೊಡ್ಡಕ್ಕನ ಜೊತೆ ರಾಧಾ ತೊಟ್ಟಿಲಿನ ಕಡೆಗೆ ಹೆಜ್ಜೆ ಹಾಕಿದಳು. ಕಕ್ಕಪ್ಪನಂತೆಯೇ ಕಾಣಿಸುತ್ತಿದ್ದ... ಕೂಸಿನ ಕೂಡದ ನೆತ್ತಿಯನ್ನು ಮುಟ್ಟಿದ ರಾಧಾ, 'ಮೋನಾ ಮೋನಾ' ಎಂದು ಮನಸಾರೆ ಆಶೀರ್ವಾದ ಮಾಡಿ ಅಲ್ಲೇ ನಿಂತಳು.

ಐನೂರರ ಆಸಾಮಿ ಹತ್ತಿರ ಬಂದು ರಾಧಳಿಗೆ, 'ಏನವಾ ಅರಾಮೈದೀಯಾ? ನಿನ್ ಜೊತೀಗಿದ್ದಾಕಿ ಸಿಕ್ಕಾ?' ಎಂದು ವಿಚಾರಿಸಿದ. 'ಇನ್ನೂ ಸಿಕ್ಕಿಲ್ಲಣ... ಎಲ್ಲೋಗೆತೋ ಹುಡ್ಗಿ' ಎಂದು ಅವನಿಗೆ ಉತ್ತರಿಸಿದ ದೊಡ್ಡಕ್ಕ ರಾಧಾಳಿಗೆ, 'ಅವತ್ತಿನ್ ದಿನ ಇವ್ರು ಬಂದಾಗ ಸಿಗ್ನಲ್ಲಿನ್ಯಾಗ ನೀವಿಬ್ರೂ ಇರ್ಲಿಲ್ಲಂತೆ. ಇವ್ರೇ ಅಂತೆಲಾ ನಿನೀಗೆ ಐನೂರು ಕೊಡ್ತಿದ್ದಿದ್ದು. ಇವಾಗ ಹೊರಾಗ ಹೇಳಿದ್ರು' ಎಂದಳು. ರಾಧಾ ಏನೇನೋ ಗೊಣಗಲತ್ತಿದಳು. ಐನೂರರ ಆಸಾಮಿ ಮತ್ತು ದೊಡ್ಡಕ್ಕ